**ಸೀನ:** ರಂಗ, ನಿನ್ನ ಪ್ರೇಯಸಿಗೆ ಬರೆದ ಪ್ರೇಮ ಪತ್ರ ಅವರಪ್ಪನ ಕೈಗೆ ಸಿಕ್ಕಿದೆ ಅಂತ ಹೇಳ್ತಿದ್ಲ… ಅವರೇನಾದರೂ ಒಂದು ಗಲಾಟೆ ಮಾಡಿದ್ರಾ?
**ರಂಗ:** ಗಲಾಟೆನೂ ಇಲ್ಲ, ಏನೂ ಇಲ್ಲ. ಅವಳನ್ನು ಮದುವೆ ಮಾಡ್ಕೊ ಅಂತ ಒಂದೇ ಸಮನೆ ಪಟ್ಟು ಹಿಡಿದಿದ್ದಾರೆ.

**ಕವಿತಾ:** ರಮ್ಯಾ, ನಾನಂತೂ ನಮ್ಮವರನ್ನು ಬಿಟ್ಟು ಒಂದು ದಿನವೂ ಇರುವುದಿಲ್ಲ.
**ರಮ್ಯಾ:** ನಿಮ್ಮವರನ್ನು ಬಹಳ ಹಚ್ಚಿಕೊಂಡಿದ್ದೀಯ ಅಂತಾಯ್ತು.
**ಕವಿತಾ:** ಹಾಗಲ್ಲ, ಅವರು ಒಂದು ದಿನ ಇಲ್ಲದಿದ್ದರೆ ಮನೆಗೆಲಸ ಯಾರು ಮಾಡ್ತಾರೆ?

**ಆತ:** ನನ್ನ ಹೆಂಡತಿಗೆ ಒಂದು ಚಿಕ್ಕ ವಿಷಯ ಸಿಕ್ಕರೆ ಸಾಕು ಗಂಟೆಗಟ್ಟಲೆ ಕೊರೀತಾಳೆ.
**ಈತ:** ನೀನು ನಿಜಕ್ಕೂ ಅದೃಷ್ಟವಂತ, ನನ್ನ ಹೆಂಡತಿಗೆ ವಿಷಯದ ಅಗತ್ಯವೇ ಬೇಕಿಲ್ಲ.

**ನಾಣಿ:** ನನ್ನ ಮಗಳ ಸಂಗೀತ ಕಲಿಕೆಯಿಂದ ನನ್ನ ಅದೃಷ್ಟವೇ ಬದಲಾಯಿತು.
**ರಾಜು:** ಅದು ಹೇಗೆ?
**ನಾಣಿ:** ಮಗಳ ಸಂಗೀತ ಅಭ್ಯಾಸದಿಂದ ಬೇಸತ್ತು, ಪಕ್ಕದ ಮನೆಯವರು ಕಡಿಮೆ ಬೆಲೆಗೆ ಮನೆಯನ್ನು ನನಗೆ ಮಾರಿ ಹೊರಟು ಹೋದರು.

**ಆತ:** ನಿಮ್ಮ ಹೆಂಡತಿಗೆ ಬಲಗೈ ನಡುಗುತ್ತೆ ಅಂತ ಹೇಳಿದ್ರಿ, ಈಗ ಹೇಗಿದೆ?
**ಈತ:** ಈಗ ವಾಸಿಯಾಗಿದೆ.
**ಆತ:** ಯಾವ ಔಷಧಿ ಕೊಟ್ರಿ?
**ಈತ:** ಯಾವ ಔಷಧಿಯೂ ಇಲ್ಲ. ವೈದ್ಯರು, 'ನೋಡಮ್ಮಾ ಇದು ವಯಸ್ಸಾದ ಸೂಚನೆ' ಅಂದ್ರು, ಅಷ್ಟೆ. ತಾನಾಗಿಯೇ ಸರಿ ಹೋಯ್ತು.

**ಮಾನಸ:** ಅವನು ಹೇಳಿದ ಜೋಕ್‌ನಲ್ಲಿ ನಗುವಂಥದ್ದು ಏನೂ ಇರಲಿಲ್ಲ. ಆದರೂ ನೀನು ನಕ್ಕಿದ್ದು ಏಕೆ?
**ರಾಗಿಣಿ:** ಅದು ನನಗೂ ಗೊತ್ತು. ಆ ಸಮಯದಲ್ಲಿ ನಾನು ನಗದೇ ಹೋಗಿದ್ದರೆ ಇನ್ನಷ್ಟು ಜೋಕ್ಸ್ ಹೇಳ್ತಿದ್ದ, ಅದ್ಕೆ.

**ಚಂದ್ರು:** ಪರಮೇಶಿ, ಈ ಕಾಲದಲ್ಲಿ ಕೆಲಸ ಸಿಗೋದೇ ಕಷ್ಟ. ಅಂಥದ್ರಲ್ಲಿ ಕೆಲಸ ಬಿಟ್ಟಿದ್ಯಾಕೆ?
**ಪರಮೇಶಿ:** ಆಫೀಸ್ ಹಾಗೂ ಮನೆಯಲ್ಲಿ (ಎರಡೂ ಕಡೆ) ಅಡುಗೆ ಮಾಡೋದಕ್ಕೆ ಇಷ್ಟವಿರಲಿಲ್ಲ.

**ಅವಳು:** ನೀನು ಮದುವೆಯಾಗುವ ಹುಡುಗ ಸ್ವಲ್ಪನೂ ಚೆನ್ನಾಗಿಲ್ಲವಂತೆ.
**ಇವಳು:** ಚೆನ್ನಾಗಿಲ್ಲದಿದ್ದರೇನಂತೆ, ಅಡುಗೆ ಕೆಲಸ, ಮನೆ ಕೆಲಸ ಎಲ್ಲಾ ಚೆನ್ನಾಗಿ ಮಾಡ್ತಾರಂತೆ.



ಲೋಕಸಭೆಯಲ್ಲಿ ಸೋತರೆ ವಿಧಾನಸಭೆಗೆ, ವಿಧಾನಸಭೆಯಲ್ಲಿ ಸೋತರೆ ಲೋಕಸಭೆಗೆ ಚುನಾವಣೆಗೆ ನಿಂತುಕೊಳ್ಳುತ್ತಿದ್ದೆವು ಹೀಗೆ ಎರಡು ಒಟ್ಟಿಗೆ ಆದರೆ ಏನು ಮಾಡುವುದು ಅರ್ಥವಾಗುತ್ತಿಲ್ಲ.

**ಅರವಿಂದ:** ನಿಮ್ಮ ನಿರ್ದೇಶನದ ಆ ಪ್ರಾಚೀನ ಸಾಮ್ರಾಜ್ಯದ ಸಿನಿಮಾದಲ್ಲಿ ಕಾರು ಕೂಡ ಇದೆಯಲ್ಲ? ಈ ಬಗ್ಗೆ ಯಾರೂ ಆಕ್ಷೇಪಣೆ ಮಾಡಲಿಲ್ಲವೆ?
**ನಿರ್ದೇಶಕ:** ಒಬ್ಬರು ತೀವ್ರವಾಗಿ ಆಕ್ಷೇಪಣೆ ಮಾಡಿ ಪತ್ರ ಬರೆದಿದ್ದರು.
**ಅರವಿಂದ:** ಏನಂತ?
**ನಿರ್ದೇಶಕ:** ನೀವು ತೋರಿಸಿರುವ ಕಾರಿನ ನಂಬರ್ ಪ್ಲೇಟ್ ನನ್ನ ಕಾರಿನ ನೋಂದಣಿ ಸಂಖ್ಯೆ. ಅನುಮತಿ ಇಲ್ಲದೆ ನಂಬರ್ ಬಳಸಿದ್ದಕ್ಕೆ ದಂಡ ಪಾವತಿಸಿ ಅಂತ ಹೇಳಿದ್ರು.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ

**ಸುಬ್ಬ:** ಡಾಕ್ಟರ್ ನನ್ನ ಹೆಂಡತಿ ಒಂದು ಲೀಟರ್ ಪೆಟ್ರೋಲ್ ಕುಡಿದುಬಿಟ್ಟಿದ್ದಾಳೆ, ಏನು ಮಾಡಲಿ?
**ಡಾಕ್ಟರ್:** 60 ಕಿ.ಮೀ. ಓಡ್ಸು, ಕುಡಿದ ಪೆಟ್ರೋಲ್ ಖಾಲಿಯಾಗುತ್ತೆ.

***

**ತಿಮ್ಮ:** ಲೋ ಗುಂಡ ರಾತ್ರಿ ಎಷ್ಟು ಹೊತ್ತಿಗೆ ಮಲಗ್ತೀಯಾ?
**ಗುಂಡ:** ಮೊಬೈಲ್ ಬ್ಯಾಟರಿ ಲೊ ಆಗಿ 5% ಅಂತ ತೋರಿಸಿದಾಗ ಮಲಗ್ತೀನಿ.

***

**ಗುಂಡ:** ಡಾಕ್ಟ್ರೇ ನಾನು ಎಷ್ಟು ಕುಡಿದರೂ ಕಿಕ್ ಹೊಡಿಯುತ್ತಿಲ್ಲ, ಏನು ಮಾಡ್ಲಿ?
**ಹೆಂಡತಿ:** ಅಯ್ಯೊ, ನಾನು ಡಾಕ್ಟರ್ ಅಲ್ಲ ನಿಮ್ಮ ಹೆಂಡತಿ ಕಣ್ರೀ.
**ಗುಂಡ:** ಹಾಂ ಈಗ ಕಿಕ್ ಹೊಡೀತು ನೋಡ್ರಿ.

***

**ತಂದೆ:** ಫೇಲ್ ಆಗಿದ್ದಿಯಾ ನಾಚಿಕೆ ಆಗಲ್ವ ನಿಂಗೆ. ಪಕ್ಕದ್ಮನೆ ಹುಡುಗೀನ ನೋಡು ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಆಗಿದಾಳೆ.



ನಾವೆಲ್ಲರೂ ಆ ಸಿಹಿಯಿಂದ ದೂರವಿರುವುದೇ ಲೇಸು

**ಮಗ:** ಸುಮ್ನಿರಪ್ಪ ಅವಳನ್ನು ನೋಡಿ ನೋಡಿ ನಾನು ಫೇಲ್ ಆಗಿದ್ದು.

***

**ಚಿಂಟು:** ಅಮ್ಮಾ ಪಕ್ಕದ ಮನೆ ಆಂಟಿ ಹೆಸರೇನು?
**ಅಮ್ಮ:** ಕಮಲಾ ಅಂತ ಅವರ ಹೆಸರು. ಯಾಕೋ?
**ಚಿಂಟು:** ಅಪ್ಪನಿಗೆ ಅವ್ರ ಹೆಸರು ಗೊತ್ತಿಲ್ಲಾ ಅನ್ಸುತ್ತೆ ಅವ್ರು ಡಾರ್ಲಿಂಗ್ ಅಂತ ಕರೀತಾರೆ.

***

**ಮೇಷ್ಟ್ರು:** ಏನು ನೋಡ್ತಾ ಇದೀರೋ?
**ಹುಡುಗರು:** ಕೋತಿನ ನೋಡ್ತಾ ಇದೀವಿ.
**ಮೇಷ್ಟ್ರು:** ನಾನು ಇಲ್ಲಿರಬೇಕಾದ್ರೆ ಅಲ್ಲೇನು ನೋಡ್ತಿರೋ ಬನ್ರೋ ಒಳಕ್ಕೆ.

***

**ತಂದೆ:** ಪೋಷಕರು ತಮ್ಮ ಮಕ್ಕಳನ್ನು ಶಾಲಾ–ಕಾಲೇಜುಗಳಿಗೆ ಯಾಕೆ ಕಳುಹಿಸುತ್ತಾರೆ ಗೊತ್ತಾ?
**ಮಗಳು:** ನಾಲ್ಕಕ್ಷರ ಕಲೀಲಿ ಅಂತ.
**ತಂದೆ:** ನೀನ್ ಮಾಡಿದ್ದೇನು?
**ಮಗಳು:** ನಾನ್ ಕಲಿತಿದ್ದೂ ಅದೇ ಎಲ್‌ಓವಿಇ...

ಸಂಗ್ರಹ: ಶರದ ಕುಲಕರ್ಣಿ, ಬೀದರ್